ಮಕ್ಕಳು ಸೇರಿ ಆಡುವಂಥ ವಾತಾವರಣವಿಲ್ಲ. ರಾಹುಲ್ ರಾಧಿಕಾ ಇಬ್ಬರೇ ಆಡಲಾರರು. ಇವರಿಗೆ ಮಕ್ಕಳೊಂದಿಗೆ ಎರಡು ಮಾತನಾಡಲೂ ಪುರುಸೊತ್ತಿಲ್ಲ.. ಇನ್ನು ಆಡುವುದು ದೂರವೇ ಉಳಿಯಿತು. ನಾನು ಒಂದೆರಡು ಬಾರಿ ಆಡಿದ್ದುಂಟು.. ಆದರೆ ಮಕ್ಕಳಿಗೇ ಇಷ್ಟವಾಗಲಿಲ್ಲ. ಪೋರ್ಟಿಕೋದಲ್ಲಿ ಕಾರಿಗೆ ಒರಗಿ, ವಿಶ್ವಾಸ್ ಮಕ್ಕಳೊಂದಿಗೆ ಆಡುವುದನ್ನು ನೋಡುತ್ತಾ ನಿಂತೆ. ಮೂರು ಜನ ಇಷ್ಟು ಗಲಾಟೆ ಮಾಡಬಲ್ಲರೇ?... ಗಲಾಟೆ ಕೇಳಿ ಇವರೂ ಆಚೆ ಬಂದರು.

ಅವನೊಂದಿಗೆ ಆಟವೇನು? ಮಕ್ಕಳನ್ನು ಒಳಗೆ ಕರಿ ಹುಬ್ಬು ಸಂಕುಚಿಸಿದರು.

ಹಲೋ... ನೀವೂ ಬರ್ತೀರಾ ಆಟಕ್ಕೆ?.... ನಿಮ್ಮ ಮಗ ಚೆನ್ನಾಗಿ ಬೌಲ್ ಮಾಡ್ತಾನೆ... ಬ್ಯಾಟ್ ಮಾಡ್ತೀರಾ?... ಅಲ್ಲಿಂದಲೇ ಜೋರಾಗಿ ಕೂಗಿದ ವಿಶ್ವಾಸ್.

ಇಲ್ಲ.. ಕತ್ತಲೆ ಆಗಿದೆ. ಆಟ ಸಾಕು. ರಾಹುಲ್! ರಾಧಿಕಾ!... ನರಹರಿ! ಬ್ಯಾಟು, ಬಾಲೂ ಎಲ್ಲಾ ಒಳಗೆ ತೆಗೆದುಕೊಂಡು ಬನ್ನಿ. ಗಡಸು ದನಿಯಲ್ಲಿ ಹೇಳಿ ಒಳಗೆ ನಡೆದರು.

ನರಹರಿ ವಿಕೆಟ್ಟು, ಬ್ಯಾಟು, ವಿಶ್ವಾಸನ ಕೈಲಿದ್ದ ಬಾಲು ತೆಗೆದುಕೊಂಡು ಒಳ ನಡೆದ. ಮಕ್ಕಳಿಬ್ಬರೂ ವಿಶ್ವಾಸನಿಗೆ ಕೈ ಬೀಸಿ ಒಳಗೆ ನಡೆದರು. ತಂದೆಯ ಈ ವರ್ತನೆ, ಆರ್ಡರ್‌ಗಳು ಅವರಿಗೆ ಹೊಸತೇನಲ್ಲ.

ತಬ್ಬಿಬ್ಬಾಗಿ ನಿಂತವನು ವಿಶ್ವಾಸ್ ಒಬ್ಬನೇ. ಹಾಗೆ ನಿಂತಿದ್ದು ಅರೆನಿಮಿಷ ಅಷ್ಟೇ. ಕಾರಿನ ಮೇಲೆ ಅವನು ಇಟ್ಟಿದ್ದ ಪುಸ್ತಕಗಳನ್ನು ಎಡಗೈಲಿ ತೆಗೆದು ಕೊಂಡು ನನ್ನತ್ತ ಬಲಗೈ ಬೀಸಿದ.

ಸಾರಿ!... ಅವ್ರು.. ಸ್ವಲ್ಪ ಹಾಗೇ... ತಡೆತಡೆದು ಹೇಳಿದೆ.

ಅರೆ!. ನಮ್ಮ ತಪ್ಪಿಗಷ್ಟೇ ನಾವು ಸಾರಿ ಕೇಳಬೇಕು. ಗಂಡನ ತಪ್ಪಿಗೆ ನೀವು ಹೇಗೆ ಹೊಣೆಯಾಗ್ತೀರಿ?.. ಹೊಣೆಗಾರಿಕೆಯಿಲ್ಲದ ಸಾರಿಗೆ, ಮಾಡದ ಒಳ್ಳೆಯದರ ಹೊಗಳಿಕೆಗೆ... ಬೆಲೆಯಿಲ್ಲ... ಮೆ ಬಿ... ಇಂಥ ಗಂಡನ್ನು ಗಂಡನನ್ನಾಗಿ ಸ್ವೀಕರಿಸಿದಕ್ಕೆ ಸಾರಿಯೆನ್ನಿಸಿದರೆ ಅದನ್ನು ನೀವು ನಿಮಗೇ ಹೇಳಿ ಕೊಳ್ಳಬೇಕು...ಬರ್ಲಾ?.. ನನ್ನತ್ತ ಕರುಣೆಯಿಂದ ನೋಡಿ ಮತ್ತೊಮ್ಮೆ ಕೈ ಬೀಸಿ, ಗೇಟು ಹಾಕದೆ, ಹಿಂತಿರುಗಿಯೂ ನೋಡದೆ ಹೊರಟು ಹೋದ ವಿಶ್ವಾಸ್.

ಬಾಗಿಲು ಹಿಡಿದುಕೊಂಡೆ ಸುಧಾರಿಸಿಕೊಂಡೆ.

ಇಂತಹ ಗಂಡನ್ನು ಗಂಡನನ್ನಾಗಿ ಸ್ವೀಕರಿಸಿದಕ್ಕೆ ಸಾರಿ ಎನ್ನಿಸಿದರೆ ಅದನ್ನು ನೀವು ನಿಮಗೇ ಹೇಳಿಕೊಳ್ಳಬೇಕು..! ಅವನು ಅಂದು ಹೋದ ಮಾತು ತಲೆಯಲ್ಲಿ ಗುನುಗುನಿಸಿ ತಲೆ ಧಿಂ ಅಂದಿತು. ಮದುವೆಯಾದ ಒಂದೆರಡು ವರ್ಷವಷ್ಟೇ ನಾನು ನೆಮ್ಮದಿಯಿಂದ ಇದ್ದಿದ್ದು. ಅದೂ ಭ್ರಮೆಯ ಸುಖ, ನೆಮ್ಮದಿ, ಬರೀ ದುಡ್ಡು, ಕಾಸು, ಒಡವೆ, ಸೀರೆಯಿಂದ ಹೆಂಡತಿಯನ್ನು ಸುಖವಾಗಿ ಇಟ್ಟುಕೊಳ್ಳಬಹುದು ಎಂದು ಅಂದುಕೊಂಡಿರುವ ಇವರು, ಅದೇ ಸುಖ ಎಂಬ ಭ್ರಮೆಯನ್ನು ಪುಷ್ಟೀಕರಿಸುವ ಸಮಾಜ... ಹೊರಗೆ ಓಡಾಡುವ, ಕೈಯಲ್ಲಿ ದುಡ್ಡಿರುವ ಗಂಡಸು ಬೇರೆ ಸಂಬಂಧಗಳನ್ನು ಇಟ್ಟುಕೊಂಡರೆ ತಪ್ಪೇನು ಇಲ್ಲ ಎನ್ನುವ ಸಂಬಂಧಿಕರು. ಎಲ್ಲವನ್ನು ದಾಟಿ ಬಂದಿದ್ದಾಗಿದೆ. ಬೇರೆ ಬದುಕು, ಈ ಸೋಗಿನ ಬದುಕು ಬಿಟ್ಟು ಬೇರೆ ಬದುಕು ಇರಬಹುದು ಎಂಬ ಭರವಸೆ ಮೂಡಿದೆ... ಅದಕ್ಕಾಗಿಯೇ ಅಲ್ಲವೇ ಇವರಿಂದ ಬಿಡುಗಡೆ ಕೇಳಿರುವುದು... ಕೊಡುತ್ತಾರೆಯೇ? ವಿಚ್ಛೇದನೆ ಪಡೆದು, ದೂರ ಹೋಗಿ ಹೊಸ ಬದುಕು, ಹೊಸ ಸ್ವತಂತ್ರ್ಯದ ಬದುಕು ರೂಢಿಸಿಕೊಳ್ಳಬಲ್ಲೆನೆ?...

ಅವನು ಹೋದ್ನಾ?.. ಬಾಗಿಲ ಬಳಿಯೇ ಬಂದ ಅತ್ತೆ ಕೇಳಿದಾಗ ತಲೆ ಎತ್ತಿದೆ. ಅತ್ತೆ, ಅತ್ತೆಯವರ ಹಿಂದೆ ಅಜ್ಜಿ ಕೈಯಲ್ಲಿ ಪ್ರಸಾದ ಶುಭ ಶಕುನವೇ ನನ್ನ ಯೋಚನೆಗೆ?

ಹೂಂ..

ವಿಕ್ರಮ ಬಂದಿದ್ದಾನಾ?..

ಹೂಂ. ಅವರಿಬ್ಬರಿಗೆ ಒಳಗೆ ಬರಲು ದಾರಿಬಿಟ್ಟು ಪಕ್ಕಕ್ಕೆ ನಿಂತೆ.

ಮಕ್ಳು ಬಂದ್ರಾ?... ಅವರಿಗೆ ಹಾಲು ಕೊಟ್ಯಾ?..

ಈಗಷ್ಟೇ ಬಂದ್ರು.. ಈಗ ಕೊಡಬೇಕು.. ಮೆಲ್ಲನೆ ಹೇಳಿದೆ.

ಮತ್ತೆ ಬಾಗಿಲಿನಲ್ಲಿ ನಿಂತುಕೊಂಡು ಏನು ಮಾಡ್ತಾ ಇದ್ಯ...? ಒಳಗೆ ನಡಿ..

ಅಜ್ಜಿ ಹೇಳಿದಾಗ ಹೂಂಗುಟ್ಟಿ ಮೆಲ್ಲನೆ ಒಳಗೆ ನಡೆದೆ.

ಅದೇನೋ ಬೊಂಬೆ ಮಾಡೋದು ಹೇಳಿಕೊಡ್ತೀನಿ ಅಂತ ಬಂದಿರೋ ಹುಡುಗನ್ನ ಮನೆಗೆ ಸೇರಿಸಬೇಡ . ಚೆನ್ನಾಗಿರೋಲ್ಲ.. ಅತ್ತೆ ಹೇಳಿದಾಗ ಎರಡು



## ಇಲ್ಲಿಯವರೆಗೆ

ಎಲೆಕ್ಷನ್‌ಗೆ ನಿಲ್ಲುವ ಸಲುವಾಗಿ ಬೆಂಗಳೂರಿನಲ್ಲಿ ಪ್ರೆಸ್‌ಮೀಟ್ ನಡೆಸು ವಾಗ ಪತಿ ಜತೆ ಪತ್ನಿಯೂ ಇರಬೇಕು ಎಂಬ ಕಾರಣಕ್ಕೆ ಅವಳು ಬೆಂಗಳೂರಿಗೆ ಬರುತ್ತಾಳೆ. ಪ್ರೆಸ್‌ಮೀಟ್‌ನಲ್ಲಿ ಅವಳ ಸ್ತ್ರೀಶಕ್ತಿ ಸಂಘದ ಚಟುವಟಿಕೆ ಬಗ್ಗೆ ಶ್ಲಾಘನೆ ನಡೆಯುತ್ತದೆ. ಪ್ರೆಸ್‌ಮೀಟ್ ಮುಗಿಸಿ ಅವಳ ಮಾವ ಹೊರಟು ನಿಲ್ಲುತ್ತಾರೆ. ಆದರೆ ಅವಳನ್ನು ಪತಿ ವಿಕ್ರಮ್ ಹೋಟೆಲ್ ರೂಮ್‌ನಲ್ಲಿ ಇರಿಸಿ ಒಡವೆ ಕೊಡಿಸುತ್ತೇನೆ ಎನ್ನುತ್ತಾನೆ. ಇತ್ತ ಬೊಂಬೆ ತಯಾರಿ ಚಟುವಟಿಕೆ ಭರದಿಂದ ನಡೆಯುತ್ತದೆ. ನರಹರಿ, ಮೀರಾ, ವಿಶ್ವಾಸ್ ಬೊಂಬೆ ತಯಾರಿ ತರಬೇತಿಯ ನೇತೃತ್ವ ವಹಿಸುತ್ತಾರೆ.

ವಿಕ್ರಮ್‌ಗೆ ಹೆಣ್ಣುಗಳ ಸಹವಾಸ ಇರುವ ವಿಷಯ ಪತ್ನಿಗೆ ತಿಳಿಯುತ್ತದೆ. ನಿಶಾ ಎಂಬಾಕೆ ಗೆಳತಿ ಮಾತ್ರವಲ್ಲ; ಆಕೆಯ ಸಂಬಂಧ ಇದಕ್ಕಿಂತಲೂ ಹೆಚ್ಚಿನದ್ದು ಎಂಬುದು ವಿಕ್ರಮ್ ಪತ್ನಿಗೆ ತಿಳಿಯುತ್ತದೆ.

ಹೆಜ್ಜೆ ಮುಂದೆ ಹೋಗಿ ಅವರಿಗಡ್ಡವಾಗಿ ನಿಂತೆ.

ಏನು ಚೆನ್ನಾಗಿರೋಲ್ಲ? ನನಗಿಂಥ ನಾಲ್ಕೋಆರೋ ವರ್ಷ ಚಿಕ್ಕವನು ಅವನು! ನಾನು ಎರಡು ಮಕ್ಕಳ ತಾಯಿ! ನನ್ನ ಜವಾಬ್ದಾರಿ, ಇತಿ ಮಿತಿ ನಂಗೆ ಗೊತ್ತು.. ನೀವು ಪದೇ ಪದೇ ಹೀಗೆ ಮಾತಾಡಬೇಡಿ.. ಅಸಹ್ಯವಾಗಿರುತ್ತೆ... ದನಿ ಎತ್ತರಿಸಿ ಹೇಳಿದಾಗ ಅತ್ತೆ ತಬ್ಬಿಬ್ಬಾದರು. ಅಜ್ಜಿ ನಿಂತಲ್ಲೇ ನಿಂತರು. ಮಹಡಿಯ ಕೋಣೆಯಿಂದ ಇವರು ಆಚೆಗೆ ಬಂದರು.

ದನಿ ಹತೋಟಿಯಲ್ಲಿ ಇರಲಿ..

ನಿಮ್ಮ ತಾಯಿಗೆ ಹೇಳಿ, ಅವರ ನಾಲಿಗೆ ಹತೋಟಿಯಲ್ಲಿ ಇದ್ದರೆ ನನ್ನ ದನಿ ಹತೋಟಿಯಲ್ಲಿ ಇರುತ್ತೆ. ನನ್ನ ತಾಳ್ಮೆಗೂ ಮಿತಿಯಿದೆ. ಅದು ನಿಮಗೂ ಈಗಾಗಲೇ ಗೊತ್ತಾಗಿದೆಯಲ್ಲ...

ಸೆರಗನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಾ ಅಡಿಗೆ ಮನೆಯತ್ತ ನಡೆದೆ. ರಾಜಮ್ಮ ಮಾಡಿ ಕೊಟ್ಟ ಹಾಲು ಕುಡಿಯುತ್ತಾ ಮಕ್ಕಳು ಡೈನಿಂಗ್ ಟೇಬಲ್ ಬಳಿ ಇದ್ದರು.

ವಿಕ್ಕೀ ಸ್ವಲ್ಪ ಕೆಳಗೆ ಬಾ ಅತ್ತೆಯ ಕೋರಿಕೆಗೆ ಇವರು ಅವಳ್ನ ಮೇಲೆ ಕಳಿಸು... ಎಂದು ಉತ್ತರಿಸಿದಾಗ, ಅತ್ತೆ ನನ್ನತ್ತ ಕಣ್ಣರಳಿಸಿದರು. ತಲೆಯಾಡಿಸಿ, ಮೇಲೆ ಹೋಗು ಕಾದಿದೆ ಎಂಬಂತೆ ತುಟಿಯರಳಿಸಿದಾಗ ಮುಖ ತಿರುಗಿಸಿ ಮೆಟ್ಟಿಲ ಬಳಿ ಬಂದೆ. ಕೆಳಗಿಳಿದರು ಇವರು.

ನಡಿ ಹೊರಗೆ ಹೋಗೋಣ. ಸ್ವಲ್ಪ ಮಾತಾಡಬೇಕು ನಿನ್ನ ಜೊತೆ.

ಮುಂದೆ ನಡೆದ ಇವರ ಹಿಂದೆ ನಡೆದೆ .

ಇಷ್ಟೊತ್ತಿನಲ್ಲಿ ಎಲ್ಲಿಗೋ ವಿಕ್ಕಿ?... ಮಕ್ಕಳು...?

ಮಕ್ಕಳಿಗೆ ನೀನು ಇದ್ಯಲ್ಲ! ನೋಡಿಕೋ ಸಣ್ಣ ಸಣ್ಣದನ್ನು ದೊಡ್ಡದು ಮಾಡಬೇಡ!...

ಅತ್ತೆಯತ್ತ ತಿರುಗಿಯೂ ನೋಡದೆ ಹೊರನಡೆದರು ಇವರು. ಹಿಂತಿರುಗಿ ಅತ್ತೆಯನ್ನು, ಮಗನಿಂದ ಅನ್ನಿಸಿಕೊಂಡ ಅತ್ತೆಯ ಮುಖವನ್ನು ನೋಡಬೇಕು ಎಂದು ತುಂಬಾ ಆಸೆಯಾಯಿತು. ಅತ್ಯಂತ ಕಷ್ಟದಿಂದ ಆ ಆಸೆಯನ್ನು ನಿಗ್ರಹಿಸಿಕೊಂಡೆ. ನನ್ನ ಮುಂದೆ ಅವರ ಅಮ್ಮನನ್ನು ಅಂದಿದ್ದು ಇದೇ ಮೊದಲು, ನನಗೆ ನೆನಪಿದ್ದ ಹಾಗೆ.